ಕೂತಳು. ಸರಕ್ ಪರಕ್ ಅಂತ ತಾಲಿಯೊಳಕ್ಕೆ ಬೀಳುತ್ತಿದ್ದ ಹಾಲಿನ ಸದ್ದಿನೊಂದಿಗೆ ಆಜಮ್ಮಜ್ಜಿ ಆಡಿದ್ದ ಮಾತುಗಳು ಮತ್ತೊಮ್ಮೆ ಎದ್ದು ಕೂತು, 'ಅವ್ವ ಹೇಳಾದ್ರಾಗೂ ನಿಜ ಐತೆ, ಇಲ್ದೇ ವೋಗಿದ್ರೆ ಗಂಡ ಅನ್ನೋನು ಸತ್ತು ಮೂವ್ವತ್ತೈದು ತುಂಬಿ ಮೂವ್ವತ್ತಾರಕ್ಕೆ ಬಿದ್ದು, ಚೊಚ್ಚಲ ಹೆರಿಗ್ಯಾಗೆ ಮಗಳು ರುಕುಮವ್ವ ತೀರೋಗಿ ಹತ್ತು ತುಂಬಿ ಹನ್ನೊಂದಕ್ಕೆ ಬೀಳುತ್ತೆ. ಅಂತಾದ್ರಾಗೂ ಹೆಂಗೋ ಹಂಗೆ ಬದ್ಕು ಸಾಗಿಸಿದವ್ಳು ಈಗ ಇಂಗೆ ಪುಕ್ಲಿಯಂಗೆ ಹೆದ್ರಿಕಂಡ್ರೆ ಆಗುತ್ತಾ' ಅಂತ ತನಗೆ ತಾನೇ ಸಂತೈಸಿಕೊಂಡು ಒಳಗೋಗುವ ಹೊತ್ತಿಗೆ ಹೊರಗೆ ಅಚ್ಚಗಾಗುತ್ತಾ ಎಲ್ಲಾ ನಿಚ್ಚಳವಾಗುತ್ತಿತು. ಸಂಪಕ್ಕಜ್ಜಿಯೊಳಗೆ ಹಳೆಯದೆಲ್ಲಾ ಒಂದೇಪಟ ಎದ್ದು ಕೂರತೊಡಗಿತ್ತು.

ಸಂಪಕ್ಕಜ್ಜಿಯ ಗಂಡ ಪಲಾರ್ದಯ್ಯನಿಗೆ ಧ್ವಜ ಕುಣಿಸುವ ಹುಚ್ಚು. ಹಬ್ಬ ಹರಿದಿನಗಳಲ್ಲಿ ದೇವರುಗಳನ್ನು ಹೊರಡಿಸಿದರೆ ಸಾಕು, ಧ್ವಜ ಹೊತ್ತು ಕುಣಿಯುವ ಉಮೇದು ಉಕ್ಕುತಿತ್ತು. ಅಂತೆಯೇ ಪಲಾರ್ದಯ್ಯನಂತೆ ಧ್ವಜ ಕುಣಿಸವವನು ಸುತ್ತೇಳು ಹಳ್ಳಿಗಳಲ್ಲಿ ಯಾರೂ ಇಲ್ಲ ಅಂತ ಊರಿಗೆ ಊರೇ ಭೇಷ್‌ಗಿರಿ ಕೊಟ್ಟಿತ್ತು. ಆವತ್ತು ದೀಪಾವಳಿ. ಇಳಿಹೊತ್ತಿನಲ್ಲಿ ಶಂಭುಲಿಂಗ ದೇವರ ಉತ್ಸವ ಹೊರಡಿಸಲಾಗಿತ್ತು. ಎಂದಿನಂತೆ ಪಲಾರ್ದಯ್ಯ ಧ್ವಜವನ್ನು ಹೊತ್ತು ಮೈಮರೆತವನಂತೆ ದೇವರ ಪಲ್ಲಕ್ಕಿಯ ಮುಂದೆ ಕುಣಿಸುತ್ತಿದ್ದ. ಹರೆ ವಾದ್ಯ, ನಗಾರಿ, ತಮಟೆಗಳ ಸದ್ದು ರಂಗಾದಂತೆಲ್ಲಾ ಪಲಾರ್ದಯ್ಯನ ಕುಣಿತಕ್ಕೂ ರಂಗೇರಿತ್ತು. ಹಂಗೆ ಹುಚ್ಚೆದ್ದವನಂತೆ ಕುಣಿಯುತ್ತಿದ್ದ ಪಲಾರ್ದಯ್ಯ ಇದ್ದಕ್ಕಿದ್ದಂತೆ ಧ್ವಜದೊಂದಿಗೆ ಕುಸಿದು ಬಿದ್ದಿದ್ದ. ಮತ್ತೆ ಮೇಲಕ್ಕೆ ಏಳಲೇ ಇಲ್ಲ. ಆಗಿನ್ನೂ ಅವನಿಗೆ ನಲವತ್ತರ ಪ್ರಾಯ. ಆಗ ಮಗ ಬಾಲ್ರಾಜ ಹೈಸ್ಕೂಲ್‌ನಲ್ಲಿ ಓದುತ್ತಿದ್ದ. ಮಿಡ್ಲ್‌ಸ್ಕೂಲ್ ಓದುತ್ತಿದ್ದ ಮಗಳು ರುಕುಮವ್ವಳ ಓದು ಬಿಡಿಸಿ ಕೈಕೆಲಸಕ್ಕಾಕಿಕೊಂಡು ಅಡಿಗೆ ಮುಂತಾದ ಮನೆಗೆಲಸಗಳನ್ನು ಕಲಿಸಿ ತನ್ನ ಸೋದರ ಸಂಬಂಧಿಯೊಬ್ಬನಿಗೆ ಕೊಟ್ಟು ಮದುವೆ ಮಾಡುವ ಹೊತ್ತಿಗೆ ಸಂಪಕ್ಕಜ್ಜಿ ಸೋತು ಸುಣ್ಣವಾಗಿ ಹೋಗಿದ್ದಳು. ಆದರೆ, ಮಗಳು ರುಕುಮವ್ವ ಚೊಚ್ಚಲ ಹೆರಿಗೆಯಲ್ಲೇ ಇನ್ನೂ ಕಣ್ಣೇ ಬಿಡದಿದ್ದ ಕಂದನೊಂದಿಗೆ ಕಣ್ಮುಚ್ಚಿದಾಗ ಸಂಪಕ್ಕಜ್ಜಿ ಕುಸಿದು ಹೋಗಿದ್ದಳು.

ಇನ್ನು ಇದ್ದೊಬ್ಬ ಮಗ ಬಾಲ್ರಾಜ ಹಂಗೂ ಹಿಂಗೂ ಹೈಸ್ಕೂಲ್ ಮುಗಿಸಿ ಇನ್ನೇನು ಕಾಲೇಜಿಗೆ ಸೇರಬೇಕು ಅನ್ನುವಾಗ ಅದೇನಾಯ್ತೋ ಏನೋ ಬೇಸಿಗೆಯ ರಜೆಯಲ್ಲಿ ಒಂದಿನ ಇದ್ದಕ್ಕಿದ್ದಂತೆ ಮನೆಯಿಂದ ನಾಪತ್ತೆಯಾಗಿಬಿಟ್ಟಿದ್ದ. ಎಲ್ಲೋ ಹೋಗವ್ನೆ ಇವತ್ ಬತ್ತಾನೆ ನಾಳಿಕ್ ಬತ್ತಾನೆ ಅಂತ ಸಂಪಕ್ಕಜ್ಜಿ ಕಾದೇ ಕಾದಿದ್ದಳು. ಇದ್ದಬದ್ದ ನೆಂಟರಿಷ್ಟರುಗಳ ಮನೆಗಳನ್ನೆಲ್ಲಾ ಎಡತಾಕಿದ್ದಳು. ಯಾರೊಬ್ಬರೂ ಇಂಥಾ ಕಡೇಲಿ ಕಂಡೆ, ಇತ್ತ ಮಕ್ಕೆ ಹೋದ ಅಂತಾನೇ ಹೇಳದ್ದರಿಂದ ಭೂಮಿಗಿಳಿದು ಹೋಗಿದ್ದಳು. ಕಡೆಗೆ ಕಂಡಕಂಡ ದೇವರುಗಳಿಗೆಲ್ಲಾ ಹರಕೆ ಕಟ್ಟಿಕೊಂಡಿದ್ದಳು. ಕಂಡಕಂಡ ಕಡೆಯಲ್ಲೆಲ್ಲಾ ಶಾಸ್ತ್ರ ಕೇಳಿದ್ದಳು. ಎಲ್ಲೂ ಯಾವೊಂದೂ ಸುಳಿವೂ ಸಿಗದೇ ಹೋಗಿ ಆಗದವರು ಯಾರಾದ್ರೂ ಸಾಯಾಕಿ ಬಿಟ್ಟವ್ರೋ ಏನೋ ಅಂತ ದಿಗಿಲಿಗೆ ಬಿದ್ದು ಊರಿನ ಒಬ್ಬೊಬ್ಬರನ್ನೂ ಕಣ್ಮುಂದೆ ತಂದುಕೊಂಡು ಅಳೆದೂ ಸುರಿದೂ ನೋಡಿದ್ದಳು. ಎತ್ತ ಕಡೆಯಿಂದ ನೋಡಿದರೂ ಯಾರೊಬ್ಬರ ಮೇಲೂ ಅನುಮಾನವೇ ಹುಟ್ಟದಾಗಿ ಎಲ್ಲಾ ಭಾರವನ್ನು ಊರ ದೇವರು ಶಂಭುಲಿಂಗನ ಮೇಲಾಕಿ ಕೈಚೆಲ್ಲಿದ್ದಳು. ಹಿಂಗೆ ಹದಿನೈದು ವರ್ಷಗಳೇ ಕಳೆದೋಗಿದ್ದವು. ಆದರೆ, ಯಾವತ್ತಾರಾ ಒಂದಿನ ಮಗ ಬಂದೇ ಬತ್ತಾನೆ ಎಂಬ ಸಂಪಕ್ಕಜ್ಜಿಯ ನಂಬಿಕೆಯೇ ಅವಳ ಜೀವವನ್ನು ಹಿಡಿದು ನಿಲಾಕಿತ್ತು.

ಬಿಡದೆ ಜಾಡಿಸುತ್ತಿದ್ದ ಮಗನ ನೆನಪಿನ ಸಂಕಟವನ್ನು ಸಂಪಕ್ಕಜ್ಜಿಯ ಕಿತ್ತು ತಿನ್ನುತ್ತಿದ್ದ ಬಡತನ ತಲೆ ಸವರುತ್ತಿತ್ತು. ಇದ್ದೊಂದು ತುಂಡು ತೋಟ ಹೆಸರಿಗೆ ಮಾತ್ರ ತೋಟ ಅನಿಸಿಕೊಂಡದ್ದು ಬಿಟ್ಟರೆ ಅದರಿಂದ ಮೂರು ಕಾಸಿನ ವರಮಾನವಿರದೆ ತೋಟದ ಪಟ್ಟೆಗಳೆಲ್ಲಾ ಬದುಗಳಾಗಿ ಮಳೆಗಾಲದಲ್ಲಿ ಸೊಂಪಾಗಿ ಹುಲ್ಲು ಬೆಳಕಂಡು ಊರ ದನಗಳಿಗೆ ಮೇವಿನ ತಾಣವಾಗಿತ್ತು. ಆದರೂ ಅಲ್ಲಲ್ಲಿ